


# 'ಚೀಟಿ' ಸ್ಪೆಷಲಿಸ್ಟ್ ಮಂಜ

ಜಗ್ಗೇಶ್ ನಟನೆಯ 'ಮೇಲುಕೋಟೆ ಮಂಜ' ಸಿನಿಮಾ ತೆರೆ ಕಾಣಲು ಸಿದ್ಧವಾಗಿದೆ. ಈ ಮಂಜನನ್ನು ಪಕ್ಕದ್ಮನೆ ಮಂಜ ಎಂದೂ ಕರೆಯಬಹುದು. ಚೀಟಿ ನಡೆಸುತ್ತ, ಜನರ ನಂಬಿಕೆ ಗಳಿಸುತ್ತ, ಕೊನೆಗೊಮ್ಮೆ ವಿಶ್ವಾಸದ್ರೋಹ ಮಾಡುವ ಎಷ್ಟೊಂದು ಮಂದಿ ನಮ್ಮ ನಡುವೆ ಇದ್ದಾರೆ! ಮಂಜ ಕೂಡ ಇವರಲ್ಲೊಬ್ಬ – 'ಚೀಟಿ' ವಿದ್ಯೆಯನ್ನು ಬಲ್ಲ ಚಾಣಾಕ್ಷ.

ಮಧ್ಯಮವರ್ಗದ ಜನರ ಆಸೆ–ಆಕಾಂಕ್ಷೆಗಳು ಹಾಗೂ ಅವುಗಳನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಗಳ ಕಥೆ 'ಮೇಲುಕೋಟೆ ಮಂಜ'ನದು. ಜಗ್ಗೇಶ್ ಸಿನಿಮಾ ಎಂದಮೇಲೆ, ಹಾಸ್ಯ ಇಲ್ಲದಿದ್ದರೆ ಹೇಗೆ? ಈ ಮಂಜ ಸಿಕ್ಕಾಪಟ್ಟೆ ನಗಿಸುತ್ತಾನಂತೆ. ಅಂದಹಾಗೆ, ಜಗ್ಗೇಶ್ ಇಲ್ಲಿ ನಟ ಮಾತ್ರವಲ್ಲ – ನಿರ್ದೇಶನ ಕೂಡ ಅವರದೇ. ಮಗನಿಗಾಗಿ 'ಗುರು' ಎನ್ನುವ ಸಿನಿಮಾ ನಿರ್ದೇಶಿಸಿದ್ದ ಅವರು, ಇದೀಗ ತಾವೇ ಗುರುವಿನ ಜಾಗದಲ್ಲಿ ನಿಂತಿದ್ದಾರೆ. ಕಥೆ, ಚಿತ್ರಕಥೆ ಕೂಡ ಅವರದೇ. ನಿರ್ದೇಶಕನಾಗಿ ಎರಡನೇ ಪ್ರಯತ್ನದಲ್ಲಿ ಸಾಕಷ್ಟು ಬದಲಾವಣೆ ಕಾಣಬಹುದು ಎನ್ನುವುದು ಅವರ ಅನಿಸಿಕೆ.

ನಿರ್ದೇಶಕನ ಪಾತ್ರ ಜಗ್ಗೇಶ್ ಅವರಿಗೆ ಹೊಸತೇನೂ ಅಲ್ಲ. ತಮ್ಮ ನಟನೆಯ ಅನೇಕ ಚಿತ್ರಗಳಲ್ಲಿ ನಿರ್ದೇಶಕನ ಪಾತ್ರವನ್ನು ಅವರು ಅನಧಿಕೃತವಾಗಿ ನಿರ್ವಹಿಸಿದ್ದಿದೆ. ಚಿತ್ರಕಥೆ, ಸಂಭಾಷಣೆಯಲ್ಲೂ ಅವರು ಭಾಗಿಯಾಗುವುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಈಗ ಅಧಿಕೃತವಾಗಿ ಕ್ಯಾಪ್ಟನ್ ಪಟ್ಟದಲ್ಲಿ ಕಾಣಿಸಿಕೊಂಡಿದ್ದಾರೆ.

ಮಂಜನ ಕಥೆ ನಡೆಯುವುದು ಮೇಲುಕೋಟೆಯಲ್ಲಿ. ಹಾಗಾಗಿ, ಅಲ್ಲಿನ ಬೆಟ್ಟಗುಡ್ಡಗಳು, ಚೆಲುವನಾರಾಯಣ ಸೊಬಗು – ಇದೆಲ್ಲವೂ ಚಿತ್ರದಲ್ಲಿದೆ. ಐಂದ್ರಿತಾ ರೇ ಚಿತ್ರದ ನಾಯಕಿ. ರಂಗಾಯಣ ರಘು ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. ರಮೇಶ್‌ಬಾಬು ಛಾಯಾಗ್ರಹಣ ಹಾಗೂ ಗಿರಿಧರ್ ದಿವಾನ್ ಸಂಗೀತ ಚಿತ್ರಕ್ಕಿದೆ.

## 'ಅಮರಾವತಿ' ಹೆಸರಿನಲ್ಲಿ..

'ಅಮರಾವತಿ' ಎನ್ನುವುದು ಸುರವೈಭೋಗವನ್ನು ಸೂಚಿಸುವ ಒಂದು ರೂಪಕ. ಅಮರತ್ವದ, ಭೋಗದ ಈ ರೂಪಕವನ್ನು ಮುರಿಯಲು, ಅಮರಾವತಿಯ ಮತ್ತೊಂದು ಮಗ್ಗುಲನ್ನು ಕಾಣಿಸುವ ಪ್ರಯತ್ನ ನಿರ್ದೇಶಕ ಬಿ.ಎಂ. ಗಿರಿರಾಜ್ ಅವರದು. ತೆರೆಕಾಣುವ ಸಿದ್ಧತೆಯಲ್ಲಿರುವ, ಅವರ ನಿರ್ದೇಶನದ 'ಅಮರಾವತಿ' ನಗರದ ಕುರೂಪವನ್ನು ಕಾಣಿಸುವ ಪ್ರಯತ್ನ.

'ಮೈತ್ರಿ' ಸಿನಿಮಾದಲ್ಲಿ ಬೀದಿಯಂಚಿನ ಮಕ್ಕಳು ಬಾಲಾಪರಾಧಿಗಳಾಗಿ ಅನುಭವಿಸುವ ಸಂಕಟಗಳನ್ನು ಚಿತ್ರಿಸಿದ್ದ ಗಿರಿರಾಜ್, 'ಅಮರಾವತಿ' ಚಿತ್ರದಲ್ಲಿ ಪೌರ ಕಾರ್ಮಿಕರ ಕಥೆ ಹೇಳುತ್ತಿದ್ದಾರೆ. ಈ ಎಲ್ಲ ಕಥನಗಳ ಉದ್ದೇಶವೂ ಒಂದೇ – ನಮ್ಮೊಳಗನ್ನು ಮತ್ತೆ ಪರೀಕ್ಷಿಸಿಕೊಳ್ಳಲು ಒತ್ತಾಯಿಸುವುದು.

ಗಿರಿರಾಜ್ ಅವರಿಗೆ ಪೌರ ಕಾರ್ಮಿಕರ ಬದುಕು ಪತ್ರ–ಪತ್ರಿಕೆಗಳ ಮೂಲಕ ಅನುಭವಕ್ಕೆ ಬಂದುದಲ್ಲ. ತೀರಾ ಹತ್ತಿರದಿಂದ ಆ ಬದುಕನ್ನು ಕಂಡವರು ಅವರು. ಅಪರೂಪಕ್ಕೆ ಸುದ್ದಿಯಾಗುವ ಈ ಜನರ ತವಕ ತಲ್ಲಣಗಳನ್ನು ಸಿನಿಮಾ ಮೂಲಕ ಹೆಚ್ಚು ಜನರಿಗೆ ತಲುಪಿಸುವ ಹಂಬಲದ ರೂಪದಲ್ಲಿ ಅವರು 'ಅಮರಾವತಿ' ರೂಪಿಸಿದ್ದಾರೆ. ಈ ಸಿನಿಮಾ ಅವರಿಗೆ ಸೃಜನಶೀಲ ಅಭಿವ್ಯಕ್ತಿಯ ಜೊತೆಗೆ, ಹೋರಾಟದ ರೂಪವಾಗಿಯೂ ಕಾಣಿಸಿದೆ. ಚಿತ್ರದ ಟ್ರೈಲರ್ ಈಗಾಗಲೇ ಬಿಡುಗಡೆಯಾಗಿದ್ದು, 'ಅಮರಾವತಿ' ಚಿತ್ರದ ಬಗ್ಗೆ ನಿರೀಕ್ಷೆಗಳನ್ನು ಹೆಚ್ಚಿಸಿದೆ.

ಚಿತ್ರದಲ್ಲಿ ಜಲಗಾರನ ಪಾತ್ರದಲ್ಲಿ ಅಚ್ಯುತ ಕುಮಾರ್ ನಟಿಸಿದ್ದಾರೆ. ಯಾವ ದೃಶ್ಯಗಳಿಗೂ ಹೇಸಿಗೆಪಡದೆ ಜಲಗಾರರ ಬದುಕನ್ನು ಓರ್ವ ಕಲಾವಿದನಾಗಿ ಅಭಿವ್ಯಕ್ತಿಸಲು ಅವರು ಪ್ರಯತ್ನಿಸಿದ್ದಾರಂತೆ. ವಿದ್ಯಾ ವೆಂಕಟರಾಮ್, ಹೇಮಂತ್, ವೈಶಾಲಿ ದೀಪಕ್ ಹಾಗೂ ನೀನಾಸಂ ಅಶ್ವತ್ಥ್ ತಾರಾಗಣದಲ್ಲಿ ಇರುವ ಪ್ರಮುಖರು.

